ನಿದ್ದೆ. ಪರವಾಗಿಲ್ಲ, ಇಲ್ಲಿ ಟಿಟಿ ಬಂದು ಎಬ್ಬಿಸುತ್ತಾರೆ, ರೈಲಿನೊಳಗೆ ಸ್ಟೇಷನ್ ಹೆಸರು ಹೇಳಿ ಅನೌನ್ಸ್‌ಮೆಂಟ್ ಬೇರೆ ಮಾಡುತ್ತಾರೆ.

ಜೆರಾಂತುತ್ ಬಂದಿಳಿದಾಗ ಸರಿಯಾಗಿ ಬೆಳಗಿನ ಜಾವ 2.15. ಆ ಮುಂಜಾವು ಸ್ಟೇಷನ್ನಲ್ಲಿ ಒಬ್ಬ ನರಪಿಳ್ಳೆ ಸಹ ಕಾಣಲಿಲ್ಲ. ಹಿತವಾದ ಚಳಿ. ಸೂಟ್‌ಕೇಸನ್ನು ಎಳೆದುಕೊಂಡು ಸ್ಟೇಷನ್ನಿಂದ ಹೊರ ಬಿದ್ದಾಗ, ನಾನು ಮೊದಲೇ ನಿಗದಿ ಮಾಡಿದ್ದ ಟ್ರಾವೆಲ್ ಏಜೆಂಟ್ ದಪ್ಪ ಅಕ್ಷರಗಳಲ್ಲಿ ನನ್ನ ಹೆಸರು ಬರೆದಿದ್ದ ಒಂದು ಬಿಳಿ ಹಾಳೆಯನ್ನು ಎತ್ತಿ ಹಿಡಿದುಕೊಂಡು ಆ ನಡು ರಾತ್ರಿ ಕಾಯುತ್ತಿದ್ದ. ಅವನು ಬರುವನೋ ಇಲ್ಲವೋ ಎಂಬ ಆತಂಕದಿಂದ ದೂರವಾದೆ. ಸೂಟ್‌ಕೇಸನ್ನು ತೆಗೆದುಕೊಂಡು ಅವನ ಕಾರಿನ ಬಳಿ ಕರೆದೊಯ್ದ. ಮುಂದಿನ ಸೀಟಿನಲ್ಲಿ ಅವನ ಪಕ್ಕದಲ್ಲಿ ಅರೆ ನಿದ್ದೆಯಲ್ಲೇ ಕುಳಿತೆ. ನೀವು ಉಳಿದುಕೊಳ್ಳಬೇಕಾದ ಹೋಟೆಲ್ ಪಕ್ಕದಲ್ಲೇ ಇದೆ ಎಂದು ಹೇಳಿ ಆ ರಾತ್ರಿ ನಿರ್ಜನವಾಗಿದ್ದ ಊರಿನ ಕೆಲವು ರಸ್ತೆಗಳಲ್ಲಿ ಹತ್ತು ನಿಮಿಷ ಸುತ್ತಾಡಿಸಿ, ಎರಡು ಅಂತಸ್ತಿನ ಕಟ್ಟಡದ ಮುಂದೆ ಕಾರನ್ನು ನಿಲ್ಲಿಸಿದ. ಬೆಂಗಳೂರಿನ ಮೆಜೆಸ್ಟಿಕ್ ಸುತ್ತಮುತ್ತಲಿರುವ ಒಂದು ಹೋಟೆಲಿನಂತೆ ಇತ್ತು. ಅಲ್ಲಿಯ ರಿಸೆಪ್ಷನ್‌ನಲ್ಲಿ ಯಾರೂ ಇರಲಿಲ್ಲ. ರೂಮಿನ ಬೀಗದಕೀ ಏಜಂಟಿನ ಕೈಯಲ್ಲಿತ್ತು. ರೂಮು ತೆಗೆದು ಸೂಟ್‌ಕೇಸನ್ನು ಒಳಗಿಟ್ಟು, 'ಬೆಳಗ್ಗೆ 8 ಗಂಟೆಗೆ ತಯಾರಾಗಿರಿ, ಕೆಳಗೆ ರೆಸ್ಟಾರಂಟ್‌ನಲ್ಲಿ ಇದನ್ನು ತೋರಿಸಿ ಬ್ರೆಕ್‌ಫಾಸ್ಟ್ ಮುಗಿಸಿಕೊಳ್ಳಿ, ಹಣಕೊಡಬೇಡಿ. ನಾನು ನಿಮ್ಮನ್ನು ಬೆಳಗ್ಗೆ ಅಲ್ಲಿ ಭೇಟಿಯಾಗುತ್ತೇನೆ, ಶುಭರಾತ್ರಿ' ಎಂದು ಹೇಳಿ, ಅವನ ಟ್ರಾವೆಲ್ ಏಜನ್ಸಿಯ ವಿಸಿಟಿಂಗ್ ಕಾರ್ಡನ್ನು ಕೊಟ್ಟು ಹೋದ.

ಬೆಳಗ್ಗೆ ಏಳಕ್ಕೆಲ್ಲ ಎದ್ದು, ಸ್ನಾನ ಮುಗಿಸಿ, ತಯಾರಾಗಿ, ಸೂಟ್‌ಕೇಸಿನೊಂದಿಗೆ ಕೆಳಗಿಳಿದು ಬಂದು ಕಾರ್ಡ್ ತೋರಿಸಿ, ಆರಂಜ್ ಜ್ಯೂಸ್, ಪಪ್ಪಾಯ, ಟೋಸ್ಟ್, ಆಮ್ಲೆಟ್ ಹೇಳಿ ಕುಳಿತಿದ್ದಾಗ ಏಜಂಟ್ ಬಂದ. 'ಗುಡ್ ಮಾರ್ನಿಂಗ್, ಒಳ್ಳೆಯ ನಿದ್ದೆ ಆಯಿತೆ' ಎನ್ನುತ್ತಾ ಎದುರಿದ್ದ ಕುರ್ಚಿಯಲ್ಲಿ ಕುಳಿತುಕೊಂಡ. 'ತಿಂಡಿ...' ಎಂದು ಕೇಳಿದ್ದಕ್ಕೆ 'ಬೇಡ' ಎಂದ. ನನ್ನ ಒತ್ತಾಯಕ್ಕೆ ಅವನು ಕಾಫಿಯನ್ನು ಮಾತ್ರ ಹೀರುತ್ತಾ, 'ಇನ್ನೇನು ಬೋಟ್ ಜೆಟ್ಟಿಗೆ ಹೋಗಲು ಬಸ್ ಬರುತ್ತದೆ' ಎಂದು ಹೇಳಿದ. ಅಷ್ಟರಲ್ಲಿ ಏಸಿ ಮಿನಿ ಬಸ್ ಬಂದು ನಿಂತಿತು. ನನ್ನೊಂದಿಗೆ ಒಂದಿಷ್ಟು ಜನ ಬಸ್ ಹತ್ತಿದರು, ಏಳು ಮಂದಿ ವಿದೇಶಿಯರು. ನಾನೊಬ್ಬನೇ ಭಾರತೀಯ. ಕೊನೆಯದಾಗಿ ಬಸ್ ಹತ್ತಿದ ನನಗೆ ಎಲ್ಲರೂ 'ಗುಡ್ ಮಾರ್ನಿಂಗ್' ಹೇಳಿ ಸ್ವಾಗತದ ನಗೆ ಬೀರಿದರು. ನಾನೂ ಸಹ ಮುಗುಳ್ನಗುತ್ತ ಉತ್ತರಿಸಿದೆ, 'ಗುಡ್ ಮಾರ್ನಿಂಗ್'. ಅಪರಿಚಿತ ಊರಲ್ಲಿ ಅಪರಿಚಿತರ ಒಂದು ಸಣ್ಣ ಮುಗುಳ್ನಗೆಯೂ ಸಹ ಭರವಸೆಯನ್ನು ಮೂಡಿಸುತ್ತದೆ.

ಹದಿನೈದು ನಿಮಿಷ ಊರಿನ ಮುಖ್ಯ ರಸ್ತೆಗಳನ್ನು ದಾಟಿ, ತೆಂಬಲಿಂಗ್ ನದೀ ತೀರದ ಬಳಿಯ ಕೌಲಾತೆಂಬಲಿಂಗ್ ಬೋಟ್ ಜೆಟ್ಟಿಯ ಬಳಿ ಬಸ್ ನಿಂತಿತು. ದೊಡ್ಡ ಕಬ್ಬಿಣದ ಕಂಬಗಳ ಮೇಲೆ ಅಚ್ಚುಕಟ್ಟಾಗಿ ತಗಡಿನ ಸೂರು ಹಾಕಿದ್ದ ಸ್ಥಳವೆ ಬೋಟ್ ಜೆಟ್ಟಿ. ಇಳಿದು ಹೋದರೆ, ಅಲ್ಲಿ ಕೂರಲು ಒಂದಿಷ್ಟು ಮರದ ಬೆಂಚುಗಳು. ಕೊನೆಯ ಗಳಿಗೆಯಲ್ಲಿ ಕೊಂಡುಕೊಳ್ಳಲು ಟೀಶರ್ಟ್, ಕೊಡೆ, ಕೇನ್ವಾಸ್ ಶೂ, ಹವಾಯಿ ಚಪ್ಪಲಿ, ಚಾಕಲೆಟ್, ಬಿಸ್ಕಟ್, ಕೂಲ್ ಡ್ರಿಂಕ್ಸ್, ನೀರಿನ ಬಾಟಲಿ, ಟಾರ್ಚ್, ಪೇಸ್ಟ್, ಬ್ರಷ್, ಸೋಪ್, ಕಂಡೋಮ್ಸ್, ಸೊಳ್ಳೆ ಕ್ರೀಂ ಮುಂತಾದುವುಗಳನ್ನು ಮಾರುವ ಒಂದು ಸಣ್ಣ ಅಂಗಡಿ. ಒಂದಿಷ್ಟು ಮೆಟ್ಟಲುಗಳನ್ನು ಇಳಿದು ಹೋದರೆ, ಕೆಲವು ಬೋಟುಗಳು. ಎಲ್ಲವೂ ಮರದ್ದು, ಮೋಟಾರ್ ಹೊಂದಿಸಿದವು. ಮೇಲೆ ಒಂದು ತಗಡಿನ ಛಾವಣಿ. ಇಬ್ಬರು ಕುಳಿತುಕೊಳ್ಳಬಹುದಾದಂತಹ ರಬ್ಬರ್ ಕುಷನ್ ಹಾಸಿದ ಮರದ ಹಲಗೆಗಳು, ಒರಗಿಕೊಳ್ಳಲು